## ಶಾರ್ಟ್‌ಹ್ಯಾಂಡ್

ನಾನು ಎಸ್ಸೆಸ್ಸೆಲ್ಸಿ ಓದುತ್ತಿದ್ದಾಗ ಪಾಂಡುರಂಗ ಎಂಬ ನನ್ನ ಸಹಪಾಠಿಯೊಬ್ಬನಿದ್ದ. ಅವನು ತುಂಬಾ ಹಾಸ್ಯಪ್ರವೃತ್ತಿಯವನು. ಎಸ್ಸೆಸ್ಸೆಲ್ಸಿ ಮುಗಿದ ಮೇಲೆ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಚದುರಿಹೋಗಿದ್ದೆವು. ಬಳಿಕ, ಅಪರೂಪಕ್ಕೆ ಒಂದು ದಿನ ಅವನು ಭೇಟಿಯಾದ. ಉಭಯ ಕುಶಲೋಪರಿಯ ನಂತರ ನಾನು, 'ನನಗೆ ಮುಂದಕ್ಕೆ ಓದಲಾಗಲಿಲ್ಲ. ಅದಕ್ಕೆ ಟೈಪಿಂಗ್ ಮತ್ತೆ ಶಾರ್ಟ್‌ಹ್ಯಾಂಡ್ ಮಾಡಿಕೊಂಡೆ' ಎಂದೆ. ಅದಕ್ಕವನು, 'ನಾನೂ ಶಾರ್ಟ್‌ಹ್ಯಾಂಡ್ ಮಾಡಿಕೊಂಡೆ ಕಣೊ. ಇಲ್ನೋಡು, ಮೂರನೇ ಮಹಡಿಯಿಂದ ಬಿದ್ದೆ. ಬಲಗೈ ಶಾರ್ಟ್‌ಹ್ಯಾಂಡ್ ಆಯ್ತು' ಎನ್ನುತ್ತ ತನ್ನ ಬಲಗೈಯನ್ನು ತೋರಿಸಿದ. ನನಗೆ ಅಳಬೇಕೋ ನಗಬೇಕೋ ಗೊತ್ತಾಗಲಿಲ್ಲ.

**ಎಂ.ಕೆ. ಮಂಜುನಾಥ್**





ಕಲೆ: ಗಣೇಶ ಆಚಾರ್ಯ

## ಎಮ್ಮೆ ಕನ್ನಡ

ಮೊನ್ನೆ ಪಕ್ಕದ ಮನೆಯವರ ಜೊತೆಗೆ ಮಾತನಾಡುತ್ತಾ ಕುಳಿತಿದ್ದೆ. ಆಗಾಗ ಪತ್ರಿಕೆಗಳಲ್ಲಿ ನನ್ನ ಲೇಖನಗಳು ಪ್ರಕಟವಾಗುವುದನ್ನು ನೋಡಿರುವುದಾಗಿ ಅವರು ತಿಳಿಸಿದರು. ಅಲ್ಲದೆ, 'ಬಹಳ ಚೆನ್ನಾಗಿ ಬರಿತಿರಿ, ನಿಮ್ದು ಎಂ.ಎ. ಕನ್ನಡ ಏನ್ರೀ?' ಎಂದು ಕೇಳಿದರು. 'ಅಲ್ಲ, ಬಿ.ಎಸ್ಸಿ.' ಎಂದು ಹೇಳಿದೆ. ಅಲ್ಲೇ ಹೋಮ್‌ವರ್ಕ್ ಮಾಡುತ್ತಿದ್ದ ನಮ್ಮ ಪುಟ್ಟಿ, 'ಮಮ್ಮೀ ಮಮ್ಮೀ, ಎಮ್ಮೆ ಕನ್ನಡ ಅಂತಾನೂ ಇರುತ್ತಾ?' ಎಂದಾಗ ಅವಳು ಅರ್ಥ ಮಾಡಿಕೊಂಡ ರೀತಿಗೆ ಇಬ್ಬರೂ ಹೊಟ್ಟೆ ಹುಣ್ಣಾಗುವಂತೆ ನಕ್ಕು ವಿವರಿಸಿದ್ದಾಯ್ತು.

**ನಳಿನಿ ಟಿ. ಭೀಮಪ್ಪ**